ಮೈಸೂರ ಗೆಜೆಟ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ ಮೇ ತಾ|| 10, ಸ|| 1890.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫು.

ರೂಲ್ ಆಫ್ ಪ್ರಾಕ್ಟೀಸ್–ಆಚರಣ ನಿಬಂಧನೆ ನಂ|| 53.

12ನೇ ಮಾರ್ಚಿ ಸ|| 1890ನೇ ಈಸವಿ.

ಚೀಫ್ ಕೋರ್ಟ್‌ನವರು ಅಪ್ಪಣೇ ಮಾಡುವುದೇನೆಂದರೆ:—

ರೇಲ್‌ವೇ ಮೊಕದ್ದಮೆಗಳನ್ನು ವಿಚಾರಣೆ ಮಾಡಲು ಅಧಿಕಾರ ಉಳ್ಳ ಮಾಜಿಸ್ಟ್ರೇಟುಗಳು ಅಂಥಾ ಮೊಕದ್ದಮೆಗಳಿಗೆ ಪ್ರತ್ಯೇಕವಾದ ರೆಜಿಸ್ಟರುಗಳನ್ನು ಇಡತಕ್ಕದ್ದು; ಈ ರೆಜಿಸ್ಟರುಗಳು ಸ|| 1878ನೇ ಈಸವಿ ಚಿ|| 12ನೇ ತಾರಿಖಿನ 5ನೇ ನಂ|| ಆಚರಣ ನಿಬಂಧನೆಯಲ್ಲಿ ತೋರಿಸಿರುವ ರೀತಿಯಲ್ಲಿ ಇರತಕ್ಕದ್ದು; ಮತ್ತು ಇಂಥಾ ಮೊಕದ್ದಮೆಗಳ ವಿಷಯದಲ್ಲಿ ವಾಡಿಕೆಯಾಗಿ ಆಗಾಗ್ಯೆ ಕಳು ಹಿಸತಕ್ಕ ಲೆಖ್ಖಗಳನ್ನೂ ತಖ್ತೆಗಳನ್ನೂ, ಅಂಥಾ ಮಾಜಿಸ್ಟ್ರೇಟರು ಅಧೀನವಾಗಿರುವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ, ಪ್ರತ್ಯೇಕವಾಗಿ ಕಳುಹಿಸತಕ್ಕದ್ದು.

2. ಇಂಥಾ ವಿಶೇಷವಾದ ರೆಜಿಸ್ಟರುಗಳಲ್ಲಿ ದಾಖಲ್ಮಾಡುವ ಮೊಕದ್ದಮೆಗಳು, ಮೇಲೆ ಕಂಡ 5ನೇ ನಂ|| ಆಚರಣ ನಿಬಂಧನೆಯಲ್ಲಿ ನಿರ್ದೇಶಿಯಾಗಿರುವ ಜನರಲ್ ರೆಜಿಸ್ಟರ್‌ನಲ್ಲಿ ದಾಖಲ್ಮಾಡತಕ್ಕ ಅಗತ್ಯವಿಲ್ಲ.

ಪರೀಕ್ಷೆ.

ತಾರೀಖು 8ನೇ ಮೇ 1890.

1890ನೇ ಇಸವಿ ಜನವರಿ 11ನೇ ಮಕ್ಕಂ ಮೈಸೂರು ಗೆಜೆಟ್ 2ನೇ ಭಾಗದ 1ನೇ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ 1889ನೇ ಇಸವಿ ಡಿಸಂಬರು 14ನೇ ಮಕ್ಕಂ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ ಇದರ ಮೂಲಕ ಪ್ರಕಟಿಸುವದೇನೆಂದರೆ:— ಇನ್‌ಫ್ಲ್ಯು ಯಂಜ್ವಾ ಎಂಬ ವಿಷ ಜ್ವರವು ಪ್ರಚುರವಾಗಿರುವದ್ದರಿಂದ ಮೈಸೂರು ಲೋಕಲ್ ಸರ್ವೀಸ್ ಮತ್ತು ಪ್ಲೀಡರುಗಳ ಪರೀಕ್ಷೆಗಳು 1890ನೇ ಇಸವಿ ಆಗಸ್ಟು 11ನೇ ತಾರೀಖು ಮತ್ತು ಆ ಲಾಗಾಯತು ಮುಂದೆ ಬರುವ ತಾರೀಖುಗಳಿಗೆ ನಿಲ್ಲಿಸಲ್ಪಟ್ಟಿರುತ್ತವೆ.

ಕೋರ್ಟ್‌ನಿಂದ,

ಎಸ್. ಆರ್. ಸುಬ್ಬರಾಯರ್,

ರೆಜಿಸ್ಟ್ರಾರ್.